## ಶ್ರೀಮತಿ ಹೇಮಲತಾ ನಾಯಕ, ಮಾನ್ಯ ಶಾಸಕರು, ಕ.ವಿ.ಪ ಇವರಿಂದ ಸ್ವೀಕೃತವಾಗಿರುವ ಶೂನ್ಯ ವೇಳೆ ಪ್ರಸ್ತಾಪಕ್ಕೆ ಉತ್ತರ

ಉತ್ತರ:

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸಣಾಪುರ ಗ್ರಾಮದ ಬಳಿ ತುಂಗಭದ್ರ ಕಾಲುವೆ ಬಳಿ ನಡೆದಿರುವ ಅತ್ಯಾಚಾರ ಮತ್ತು ಕೊಲೆ ಹಾಗೂ ಹಲ್ಲೆ ಬಗ್ಗೆ ಗಂಗಾವತಿ ಗ್ರಾಮೀಣ ಪೊಲೀಸರು ಈಗಾಗಲೇ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ತಮಿಳುನಾಡು ಮೂಲದ ಮಹಿಳೆಯೊಬ್ಬರು ನಡೆಸುತ್ತಿದ್ದಾರೆನ್ನಲಾದ ಹೋಂಸ್ಟೇ ಕುರಿತು ಹಾಗೂ ಈ ಹೋಂಸ್ಟೇನಲ್ಲಿ ವಾಸ್ತವ್ಯ ಹೂಡಿದ್ದ ವಿದೇಶಿಗರಿಬ್ಬರು ಹಾಗೂ ಪರರಾಜ್ಯದವರಿಬ್ಬರು ತುಂಗಭದ್ರಾ ಕಾಲುವೆ ಬಳಿ ರಾತ್ರಿ ವೇಳೆ ಊಟ ಮಾಡುತ್ತಿದ್ದಾಗ ಈ ಘಟನೆ ಸಂಭವಿಸಿರುವ ಬಗ್ಗೆ ಪೊಲೀಸ್ ಇಲಾಖೆ ತನಿಖೆ ನಡೆಸುತ್ತಿದೆ.

ಹೋಂಸ್ಟೇಗಳ ಪ್ರಾರಂಭ ಅಥವಾ ಕಾರ್ಯನಿರ್ವಹಣೆಗೆ ಪ್ರವಾಸೋದ್ಯಮ ಇಲಾಖೆಯಿಂದ ಯಾವುದೇ ಅನುಮತಿ ಅಥವಾ ಪರವಾನಿಗೆಯನ್ನು ಈ ಹೋಂಸ್ಟೇಗೆ ನೀಡಿರುವುದಿಲ್ಲ. ರಾಜ್ಯದಲ್ಲಿ ಹೋಂಸ್ಟೇಗಳನ್ನು ನಡೆಸಲು ಮುಂದೆಬರುವ ಮನೆ ಮಾಲೀಕರುಗಳಿಗೆ ಸಕ್ಷಮ ಪ್ರಾಧಿಕಾರಿಗಳಾದ ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳು ಒಪ್ಪಿಗೆ ನೀಡಿರುವ ದೃಢೀಕರಣದ ದಾಖಲೆಗಳ ಆಧಾರದ ಮೇಲೆ ಪ್ರವಾಸೋದ್ಯಮ ಇಲಾಖೆ ಪರವಾಗಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಹೋಂಸ್ಟೇ ನಡೆಸಲು ಐದು ವರ್ಷಗಳಿಗೊಮ್ಮೆ ನವೀಕರಣ ಹೊಂದಬಹುದಾದ ನೋಂದಣಿಯನ್ನು ಮಾಡುತ್ತಾರೆ. ಈ ರೀತಿಯ ಅನಧಿಕೃತ ಹೋಂಸ್ಟೇಗಳ ಬಗ್ಗೆ ಮತ್ತು ಎಲ್ಲಾ ರೆಸಾರ್ಟ್‌ಗಳ ಬಗ್ಗೆ ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಪ್ರಾಧಿಕಾರಗಳು ನಿಯಮಾನುಸಾರ ಅಗತ್ಯ ಕ್ರಮ ವಹಿಸಬೇಕಾಗಿರುತ್ತದೆ.

ಪ್ರಸ್ತುತ ಘಟನೆಯು ಗಂಭೀರವಾದ ಘಟನೆಯಾಗಿದ್ದು, ಈ ಘಟನೆಯಿಂದ ರಾಜ್ಯಕ್ಕೆ ಭೇಟಿ ಕೊಡುವ ಪ್ರವಾಸಿಗರ ಸುರಕ್ಷತೆಯ ಬಗ್ಗೆ ಕೆಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಪ್ರವಾಸೋದ್ಯಮ ಇಲಾಖೆಯು ಇಂತಹ ಘಟನೆಗಳು ಮರುಕಳಿಸದಂತೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಿದೆ.

1. ಪ್ರವಾಸೋದ್ಯಮ ಸ್ಥಳಗಳಲ್ಲಿ, ಐತಿಹಾಸಿಕ ಪ್ರೇಕ್ಷಣಿಯ ಸ್ಥಳಗಳಲ್ಲಿ, ಸಂರಕ್ಷಿತ ಸ್ಮಾರಕಗಳಿರುವ ಪ್ರದೇಶಗಳಲ್ಲಿ ಪೊಲೀಸ್ ಇಲಾಖೆಯೊಂದಿಗೆ ಸಮಾಲೋಚಿಸಿ ಹೆದ್ದಾರಿ ಗಸ್ತು ಮಾದರಿಯಲ್ಲಿ ಪ್ರವಾಸಿ ಸ್ಥಳಗಳ ಗಸ್ತನ್ನು ಪ್ರಾರಂಭಿಸಲಾಗುವುದು.
2. ಪ್ರವಾಸಿ ಮಿತ್ರ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸಲು ಸೂಕ್ಷ ಮತ್ತು ಅತೀ ಸೂಕ್ಷ ಪ್ರದೇಶಗಳಲ್ಲಿ ದಿನದ 16 ಗಂಟೆ ಪ್ರವಾಸಿ ಮಿತ್ರ (ಹೋಂ ಗಾರ್ಡ್) ವ್ಯವಸ್ಥೆಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

......2

3. ನೋಂದಣಿ ರಹಿತ ಹೋಂಸ್ಟೇಗಳಾಗಲಿ ಅಥವಾ ರೇಸಾರ್ಟ್‌ಗಳನ್ನಾಗಲಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.
4. ಪ್ರವಾಸಿ ಸ್ಥಳಗಳಲ್ಲಿ ಅಧಿಕೃತ ಹೋಂಸ್ಟೇಗಳ ಮತ್ತು ರೇಸಾರ್ಟ್‌ಗಳ ಮಾಹಿತಿ ಫಲಕಗಳನ್ನು ಅಲ್ಲಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.

ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲು ಸೂಕ್ತ ಮಾಹಿತಿಯನ್ನು ಕಾಲ-ಕಾಲಕ್ಕೆ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಒದಗಿಸಲಾಗುವುದು.

ಹೋಂಸ್ಟೇ ಮತ್ತು ರೇಸಾರ್ಟ್‌ಗಳನ್ನು ಪ್ರಾರಂಭಿಸಲು ಮತ್ತು ನಿರ್ವಹಿಸಲು ಪ್ರವಾಸೋದ್ಯಮ ಇಲಾಖೆಯ ಪರವಾನಿಗೆಯನ್ನು ಕಡ್ಡಾಯಗೊಳಿಸಲಾಗುವುದು.

(ಎಚ್.ಕೆ. ಪಾಟೀಲ)
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು